**ದಿನಾಂಕಃ 28.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿಗಳ ಪರ ವಕೀಲರಾದ ಶ್ರೀಮತಿ ಪಿ ಎಂ ಪಿ ರವರಿಂದ**

| | |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

1.ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ.13 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎನ್ ಸಿ ಜಿ ರವರಿಂದಃ**

ಈ ಹಿಂದೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಾಗ ನಿಪಿ.13 ರ ಮರಣ ಪ್ರಮಾಣ ಪತ್ರವನ್ನು ಈಗಾಗಲೇ ಹಾಜರುಪಡಿಸಿರುವುದಾಗಿ ಹೇಳಿದ್ದೀರಿ ಎಂದರೆ ಸರಿ. ನೀವು ಹೇಳಿದ್ದ ಪ್ರಮಾಣ ಪತ್ರ ಮತ್ತು ನಿಪಿ.13 ರ ಪ್ರಮಾಣ ಪತ್ರ ಎರಡೂ ಬೇರೆ ಬೇರೆ ಆಗಿದಿಯಾ ಎಂದರೆ ಸಾಕ್ಷಿಯು ಎರಡೂ ಒಂದೇ ಎಂದು ನುಡಿಯುತ್ತಾರೆ. ನಿಪಿ.13 ರ ಮರಣ ಪ್ರಮಾಣ ಪತ್ರವನ್ನು ನೀವು ಎಲ್ಲಿಂದ ಪಡೆದುಕೊಂಡಿದ್ದೀರಿ ಎಂದರೆ ನಾಢ ಕಚೇರಿಯಿಂದ ಎಂದು ನುಡಿಯುತ್ತಾರೆ. ನಾಢ ಕಚೇರಿಯವರು ಏನಾದರೂ ನಿಪಿ.13 ಕ್ಕೆ ಸೀಲ್ ಅನ್ನು ಹಾಕಿದ್ದಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಯಾವ ದಿನಾಂಕದಂದು ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ನೀಡಿದ್ದೀರಿ ಎಂದರೆ ನನ್ನ ಗಂಡ ತೀರಿಕೊಂಡ ದಿನವೇ ಅಂಗನವಾಡಿ ಕಾರ್ಯ ಕರ್ತರಿಗೆ ಅರ್ಜಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಎಂ ಪಿ ನಾಗರಾಜ್ ರವರು ನಿಮ್ಮ ಗಂಡ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.13 ರ ಮರಣ ಪ್ರಮಾಣ ಪತ್ರವನ್ನು ನೀವು ಯಾವಾಗ ಪಡೆದುಕೊಂಡಿದ್ದೀರಿ ಎಂದರೆ ನನ್ನ ಗಂಡ ತೀರಿಕೊಂಡ 21ದಿನ ಕಳೆದ ನಂತರ ಒಂದು ತಿಂಗಳ ಒಳಗಾಗಿ ಪಡೆದುಕೊಂಡಿದ್ದೆನು ಎಂದು ನುಡಿಯುತ್ತಾರೆ. ಆ ದಿನಾಂಕವನ್ನು ಹೇಳಲು ಅಗುತ್ತದಾ ಎಂದರೆ ಮರೆತಿದ್ದೇನೆ ಎಂದು ನುಡಿಯುತ್ತಾರೆ. ಅರ್ಜಿಯನ್ನು ನೀಡುವಾಗ ಹೆಸರನ್ನು ಏನೆಂದು ಬರೆದುಕೊಟ್ಟಿದ್ದೀರಿ ಎಂದರೆ ಎಂ ಪಿ ನಾಗರಾಜು ರವರು ಮರಣ ಹೊಂದಿದ್ದರು ಎಂದು ಬರೆದುಕೊಟ್ಟಿದ್ದೆನು ಎಂದು ನುಡಿಯುತ್ತಾರೆ. ಏನೆಂದು ಅರ್ಜಿ ನೀಡಿದ್ದೀರಿ ಎಂದರೆ ಅರ್ಜಿ ನೀಡಿಲ್ಲ ಆದರೆ ಅಂಗನವಾಡಿ ಕಾರ್ಯ ಕರ್ತರು ಮನೆಯ ಬಳಿ ಬಂದು ಎಂ ಪಿ ನಾಗರಾಜು ರವರ

adhar card ಪಡೆದು ಯಾವಾಗ ಮರಣ ಹೊಂದಿದ್ದಾರೆ ಎಂದು ತಿಳಿದು ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅಂಗನವಾಡಿ ಕಾರ್ಯ ಕರ್ತರು ಆ ರೀತಿ ಯಾವಾಗ ಬಂದಿದ್ದಾರೆ ಎಂದರೆ ಸಾಕ್ಷಿಯು ದಿಃ 19.04.2020 ರಲ್ಲಿ ಬಂದಿದ್ದರು ಎಂದು ನುಡಿಯುತ್ತಾರೆ. ಅಂಗನವಾಡಿ ಕಾರ್ಯ ಕರ್ತರು ನಿಮ್ಮ ಮನೆಯ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಜೊತೆ ನಿಮಗೆ ಸಂಬಂಧ ಕಟ್ಟಲು ನಿಪಿ.13 ರ ಮರಣ ಪ್ರಮಾಣ ಪತ್ರವನ್ನು ನೀವು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ರವರು ವಾದಿಯ ವಾರಸುದಾರಾಗಿರುವುದರಿಂದ ಅವರಿಗೆ ಆಸ್ತಿ ದಕ್ಕುತ್ತದೆ ಎನ್ನುವ ಕಾರಣಕ್ಕೆ ನೀವು ನಿಪಿ.13 ರ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,**
**ಗುಬ್ಬಿ**

Pw.2 is present and further chief examined.

Ex.P.13 is marked and fully cross examined.

To hear on Lrs application.
Call on.06.08.2026.